**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.233/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಧರ್ಮಮತಿ | ***P.W-10*** |
| ಗಂಡನ ಹೆಸರು | : ರಾಜಶೇಖರ ನಾಯಕ | ***C.W- 12*** |
| ವಯಸ್ಸು | : 52 ವರ್ಷ | |
| ಉದ್ಯೋಗ | : ಮನೆಗೆಲಸ | |
| ವಾಸ | : ರಾಣೆಬೆನ್ನೂರು | |

**ದಿನಾಂಕಃ 21-06-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಆರೋಪಿತರು ಗೊತ್ತು. ಅವರು ನನ್ನ ಮನೆಯ ಪಕ್ಕದಲ್ಲಿ ವಾಸವಾಗಿದ್ದಾರೆ. ಚಾಸಾ-1 ಇವರ ಪರಿಚಯ ಇದೆ. ಚಾಸಾ-1 ಮತ್ತು ಆರೋಪಿತರ ಮಧ್ಯೆ 2015 ರಲ್ಲಿ ಗಲಾಟೆಯಾಗಿತ್ತು. ಯಾವ ವಿಷಯಕ್ಕಾಗಿ ಗಲಾಟೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಗಲಾಟೆಯಾದ ನಂತರ ಚಾಸಾ-1 ತನ್ನ ತವರು ಮನೆಗೆ ಹೋದರು. ಉಳಿದ ವಿಷಯ ನನಗೆ ಗೊತ್ತಿರುವುದಿಲ್ಲ. ಗಲಾಟೆ ಯಾವ ಕಾರಣಕ್ಕಾಗಿ ಆಗಿತ್ತು ಎಂದು ನನಗೆ ಗೊತ್ತಿಲ್ಲ ನಾನು ಗಲಾಟೆ ನಡೆದ ಸ್ಥಳಕ್ಕೆ ಹೋಗಿರಲಿಲ್ಲ. ಪೊಲೀಸರು ನನ್ನ ಒಂದು ಸಹಿಯನ್ನು ತೆಗೆದುಕೊಂಡು ಹೋಗಿದ್ದರು ಆದರೆ ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ಅವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು , ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಆರೋಪಿ 2 ಮತ್ತು ಚಾಸಾ-1 ಇವರ ಮದುವೆ 2013 ರಲ್ಲಿ ಆಗಿತ್ತು ಎಂದರೆ ನಿಜ. ಚಾಸಾ-1 ಇವರಿಗೆ ಆರೋಪಿತರು ವರದಕ್ಷಿಣೆ ಹಣಕ್ಕಾಗಿ ತೊಂದರೆ ಕೊಡುತ್ತಿದ್ದರು. ಆ ವಿಷಯ ಚಾಸಾ-1 ಇವರು ನನಗೆ ಆಗಾಗ ಹೇಳುತ್ತಿದ್ದರು ಎಂದರೆ ಸರಿ ಅಲ್ಲ. ನಾನು ಆ ಕಾರಣಕ್ಕಾಗಿ ಆರೋಪಿತರಿಗೆ ಬುದ್ಧಿವಾದ ಹೇಳಿ ಬರುತ್ತಿದ್ದೆ ಎಂದರೆ ಸರಿ ಅಲ್ಲ. ಚಾಸಾ-1 ಇವರಿಗೆ ಆರೋಪಿ 1 ಮತ್ತು 2 ಇವರು ಸೇರಿ ಗರ್ಭಪಾತ ಮಾಡಿಸಿದ್ದು ಆ ವಿಷಯ

ಅವಳು ನನಗೆ ತಿಳಿಸಿದ್ದಳು ಎಂದರೆ ಸರಿ ಅಲ್ಲ. ದಿನಾಂಕ 12-06-2015 ರಲ್ಲಿ ಚಾಸಾ-1 ಹೆರಿಗೆಯ ನಂತರ ತನ್ನ ಮಗುವಿನೊಂದಿಗೆ ತನ್ನ ತಂದೆ ತಾಯಿಯ ಜೊತೆಗೆ ಆರೋಪಿತನ ಮನೆಗೆ ಬಂದಾಗ ಆರೋಪಿತರು ಮನೆಗೆ ಒಳಗಡೆ ಬಿಡದೇ ಅವಳೊಂದಿಗೆ ಗಲಾಟೆ ಮಾಡಿದ್ದರು ಎಂದರೆ ಆ ಸಮಯದಲ್ಲಿ ಆರೋಪಿತರು ಮನೆಯಲ್ಲಿ ಇದ್ದಿರಲಿಲ್ಲ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಅಕ್ಕಪಕ್ಕದ ಮನೆಯವರು ಬುದ್ಧಿವಾದ ಹೇಳಿ ಮನೆಯೊಳಗೆ ಕಳಿಸಿದ್ದೆ ಎಂದರೆ ಸರಿ ಅಲ್ಲ. ಈ ವಿಚಾರಕ್ಕಾಗಿ ಪದೇ ಪದೇ ಅವರು ಗಲಾಟೆ ಮಾಡುತ್ತಿದ್ದರು ಎಂದರೆ ಸರಿ ಅಲ್ಲ. ಆ ಬಗ್ಗೆ ನಾನು ಬುದ್ಧಿ ಹೇಳುತ್ತಿದ್ದೆ ಎಂದರೆ ಸರಿ ಅಲ್ಲ. ಈ ಕುರಿತು ನಾನು ದಿನಾಂಕ 30-09-2015 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಸದ್ರಿ ಹೇಳಿಕೆಯ ಭಾಗವನ್ನು ನಿಪಿ-29 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ**

ಆರೋಪಿ ಪರ ವಕೀಲರ ಪಾಟೀ ಸವಾಲು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.

A.2 and 4 present.

A.1, 3 and 5 absent. EP filed. Allowed.

CW.4 and 13 present examined as PW.10 and 11 got marked Ex.P-4(b).

After declaring PW.10 as hostile. APP cross examined PW.10 fully.

Defence counsel fully cross examined PW.11.

Prosecution given up CW-12.

Issue S/S to CW.7 and 15 by -10-2024

**2nd Addl. Senior Civil Judge**
**& JMFC, Ranebennur.**

**-2-** **C.C No. /20**

**P.W-1**